# ದೇಶದ 50 ಕ್ಕೂ ಹೆಚ್ಚು ನಗರಗಳಲ್ಲಿ ಫ್ಲಿಪ್ ಕಾರ್ಟ್ ಗ್ರಾಸರಿ ವ್ಯವಹಾರ ವಿಸ್ತರಣೆ

- *ಕೋಲ್ಕತ್ತಾ, ಪುಣೆ, ಅಹಮದಾಬಾದ್, ಜೈಪುರ, ಚಂಡೀಘಡ ಮತ್ತು ಮೈಸೂರು ನಗರಗಳಲ್ಲಿಯೂ ಫ್ಲಿಪ್ ಕಾರ್ಟ್ ಗ್ರಾಸರಿ ಸೇವೆ ಲಭ್ಯ*
- *ಮುಂದಿನ ಆರು ತಿಂಗಳಲ್ಲಿ 70 ಕ್ಕೂ ಹೆಚ್ಚು ನಗರಗಳಿಗೆ ವಿಸ್ತರಣೆ ಮಾಡುವ ಯೋಜನೆ*
- *ಗ್ರಾಸರಿ ವಿಸ್ತರಣೆಯಿಂದ ಆಹಾರ ಸಂಸ್ಕರಣೆ ಉದ್ಯಮ, ರೈತರಿಗೆ ಸಂಪರ್ಕ ಕಲ್ಪಿಸಲು ಸಹಕಾರಿ*

**ಬೆಂಗಳೂರು, ಮಾರ್ಚ್ 02, 2021**:ಭಾರತದ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ತನ್ನ ದಿನಸಿ ಸೇವೆಗಳನ್ನು ದೇಶವ್ಯಾಪಿ ಮಾರುಕಟ್ಟೆ ಮೂಲಕ ಇನ್ನೂ 50ಕ್ಕೂ ಹೆಚ್ಚು ನಗರಗಳಿಗೆ ವಿಸ್ತರಣೆ ಮಾಡಿದೆ. ಈ ವಿಸ್ತರಣೆಯಿಂದಾಗಿ 7 ಮೆಟ್ರೋ ನಗರಗಳು ಮತ್ತು 40 ಕ್ಕೂ ಹೆಚ್ಚು ಸುತ್ತಮುತ್ತಲಿನ ನಗರಗಳಿಗೆ ಅತ್ಯುತ್ಕೃಷ್ಟ ಗುಣಮಟ್ಟದ ದಿನಸಿ ಉತ್ಪನ್ನಗಳು ದೊರೆಯಲಿವೆ. ಅಲ್ಲದೇ, ಅತ್ಯುತ್ತಮವಾದ ಉಳಿತಾಯ ಮತ್ತು ಕೊಡುಗೆಗಳು, ತ್ವರಿತವಾಗಿ ವಿತರಣೆ ಹಾಗೂ ತಡೆರಹಿತವಾದ ದಿನಸಿ ಶಾಪಿಂಗ್ ಅನುಭವಗಳು ದೊರೆಯಲಿವೆ.

ಕಳೆದ ಹಲವು ವರ್ಷಗಳಲ್ಲಿ ಫ್ಲಿಪ್ ಕಾರ್ಟ್ ದಿನಸಿ ಸೇವೆಗಳನ್ನು ಕ್ಷಿಪ್ರವಾಗಿ ವಿಸ್ತರಣೆ ಮಾಡಲು ಹೂಡಿಕೆ ಮಾಡುತ್ತಾ ಬಂದಿದೆ ಮತ್ತು ಕಳೆದ ವರ್ಷ ದೊಡ್ಡ ಮಟ್ಟದಲ್ಲಿ ವಿಸ್ತರಣೆ ಮಾಡಿದೆ. ಕೊಲ್ಕತ್ತಾ, ಪುಣೆ ಮತ್ತು ಅಹ್ಮದಾಬಾದ್ ನಂತಹ ಮೆಟ್ರೋ ನಗರಗಳಲ್ಲಿನ ಫ್ಲಿಪ್ ಕಾರ್ಟ್ ನ ಪ್ರತ್ಯೇಕವಾದ ಗ್ರಾಸರಿ ಫುಲ್ ಫಿಲ್ಮೆಂಟ್ ಸೆಂಟರ್ ಗಳ ನೆರವಿನಿಂದ ಗ್ರಾಹಕರಿಗೆ ಅತ್ಯುತ್ತಮವಾದ ಗ್ರಾಸರಿ ಸೇವೆಗಳನ್ನು ಒದಗಿಸಲಾಗುತ್ತದೆ. ಫ್ಲಿಪ್ ಕಾರ್ಟ್ ಮೆಟ್ರೋ ನಗರಗಳಲ್ಲದೇ ಮೈಸೂರು, ವಾರಂಗಲ್, ಕಾನ್ಪುರ, ಅಲಹಾಬಾದ್, ಆಲಿಘರ್, ಜೈಪುರ, ಚಂಡೀಘಡ, ರಾಜ್ ಕೋಟ್, ವಡೋದರ, ವೆಲ್ಲೂರು, ತಿರುಪತಿ ಮತ್ತು ದಮನ್ ನಂತಹ ನಗರಗಳಿಗೂ ಈ ಸೇವೆಯನ್ನು ಒದಗಿಸುತ್ತಿದೆ.

ಸಾಂಕ್ರಾಮಿಕವು ಲಕ್ಷಾಂತರ ಜನರು ಇ-ಕಾಮರ್ಸ್ ಶಾಪಿಂಗ್, ಅನುಕೂಲಕರ ಹಾಗೂ ಡಿಜಿಟಲ್ ವ್ಯವಹಾರಗಳತ್ತ ಕಡೆಗೆ ಒಲವು ತೋರುವಂತೆ ಮಾಡಿದೆ. ಇದು ಇ-ಗ್ರಾಸರಿಗೆ ಗ್ರಾಹಕರಿಂದ ಹೆಚ್ಚು ಬೇಡಿಕೆ ಬರುವಂತೆ ಮಾಡಿದೆ. ಕೇವಲ ಮೆಟ್ರೋ ನಗರಗಳಲ್ಲದೇ, 2 ನೇ ಶ್ರೇಣಿಯ ನಗರಗಳಿಂದಲೂ ಬೇಡಿಕೆ ಹೆಚ್ಚಾಗುವಂತೆ ಮಾಡಿದೆ.

**ಫ್ಲಿಪ್ ಕಾರ್ಟ್ ನ ಜನರಲ್ ಮರ್ಚೆಂಡೈಸ್ ಮತ್ತು ಫರ್ನಿಚರ್, ಗ್ರಾಸರಿ ವಿಭಾಗದ ಸೀನಿಯರ್ ವೈಸ್ ಪ್ರೆಸಿಡೆಂಟ್ ಮನೀಶ್ ಕುಮಾರ್** ಅವರು ಈ ಬಗ್ಗೆ ಮಾತನಾಡಿ, ``ಬಳಕೆದಾರರಿಂದ ಗುಣಮಟ್ಟದ ಆಹಾರ ಮತ್ತು ಗೃಹೋಪಯೋಗಿ ಪೂರೈಕೆಗಳಿಗೆ ಬೇಡಿಕೆ ಹೆಚ್ಚಾಗುವುದರೊಂದಿಗೆ ಗ್ರಾಸರಿ ವಿಭಾಗವು ಅತ್ಯಂತ ಹೆಚ್ಚು ಬೆಳವಣಿಗೆ ಹೊಂದುತ್ತಿರುವ ವಿಭಾಗದಲ್ಲಿ ಒಂದೆನಿಸಿದೆ. ಇದೇ ಹಾದಿಯಲ್ಲಿ ನಾವು ದೇಶಾದ್ಯಂತ ನಮ್ಮ ಗ್ರಾಸರಿ ಕಾರ್ಯಾಚರಣೆಗಳಿಗೆ ಹೂಡಿಕೆ ಪ್ರಮಾಣವನ್ನು ಹೆಚ್ಚು ಮಾಡಿದ್ದೇವೆ ಮತ್ತು ನಮ್ಮ ಪರಿಸರವ್ಯವಸ್ಥೆಯ ಪಾಲುದಾರಿಕೆಗಳನ್ನು ಮತ್ತಷ್ಟು ಬಲಗೊಳಿಸಿದ್ದೇವೆ. ಇದರ ಮೂಲಕ ವಿಸ್ತಾರವಾದ ಉತ್ಪನ್ನಗಳ ಆಯ್ಕೆ, ಹೇರಳವಾದ ಸಪ್ಲೈ ಚೇನ್ ಮತ್ತು ಸುಲಲಿತವಾದ ಇನ್-ಆ್ಯಪ್ ಅನುಭವಗಳನ್ನು ಗ್ರಾಹಕರಿಗೆ ನೀಡುತ್ತಿದ್ದೇವೆ. ಕಳೆದ ಒಂದು ವರ್ಷದಲ್ಲಿ ನಾವು 2 ನೇ ಶ್ರೇಣಿಯ ನಗರಗಳಲ್ಲಿ ಗ್ರಾಸರಿಗೆ ಬೇಡಿಕೆ ಹೆಚ್ಚಾಗಿರುವುದನ್ನು ಕಂಡಿದ್ದೇವೆ. ಮನೆಯಲ್ಲೇ ಇದ್ದುಕೊಂಡು ಗ್ರಾಹಕರು ಸಂಪರ್ಕರಹಿತವಾದ ಶಾಪಿಂಗ್ ಗೆ ಆದ್ಯತೆ ನೀಡುತ್ತಿರುವುದು ಹೆಚ್ಚಾಗಿದೆ. ಇದೇ ಟ್ರೆಂಡ್ ಇನ್ನೂ ಮುಂದುವರಿಯಬಹುದು ಎಂದು ನಾವು ಭಾವಿಸಿದ್ದೇವೆ ಮತ್ತು ಭಾರತದಲ್ಲಿ ಇ-ಗ್ರಾಸರಿ ವಿಭಾಗ ಸದೃಢವಾಗಿ ಬೆಳೆಯಲು ಅವಕಾಶ ಸಿಕ್ಕಿದಂತಾಗಿದೆ'' ಎಂದು ಅಭಿಪ್ರಾಯಪಟ್ಟರು.

ಇಂದು ಫ್ಲಿಪ್ ಕಾರ್ಟ್ 200 ಕ್ಕೂ ಹೆಚ್ಚು ವಿಭಾಗಗಗಳಲ್ಲಿ 7000 ಕ್ಕೂ ಅಧಿಕ ಗ್ರಾಸರಿ ಉತ್ಪನ್ನಗಳನ್ನು ಹೊಂದಿದೆ. ಗೃಹೋಪಯೋಗಿ ಪೂರೈಕೆಗಳು, ಸ್ಟಾಪಲ್ಸ್, ಅಟ್ಟಾ, ದಾಲ್, ಖಾದ್ಯತೈಲ, ತುಪ್ಪ, ಸ್ನ್ಯಾಕ್ಸ್ & ಬೇವರೇಜಸ್, ಕಾನ್ಫೆಕ್ಷನರಿ, ಪರ್ಸನಲ್ ಕೇರ್, ಡೈರಿ & ಮೊಟ್ಟೆ ಸೇರಿದಂತೆ ಇನ್ನೂ ಅನೇಕ ಉತ್ಪನ್ನಗಳನ್ನು ಪೂರೈಕೆ ಮಾಡುತ್ತಿದೆ. ದಿನಸಿ ವಿಭಾಗವು ಆನ್ ಲೈನ್ ಶಾಪಿಂಗ್ ನಲ್ಲಿ ಬಹುದೊಡ್ಡ ವಿಭಾಗವಾಗುತ್ತಿದೆ ಮತ್ತು ಫ್ಲಿಪ್ ಕಾರ್ಟ್ ಗೆ ಹೊಸ ಹೊಸ ಗ್ರಾಹಕರನ್ನು ಆನ್ ಲೈನ್ ವ್ಯಾಪ್ತಿಗೆ ತರಲು ಆದ್ಯತೆ ನೀಡಲು ಸಾಧ್ಯವಾಗಿಸುತ್ತಿದೆ. ಕಂಪನಿಯ ಈ ದಿನಸಿ ಕಾರ್ಯಾಚರಣೆಗಳು ಸ್ಥಳೀಯ ಆಹಾರ ಸಂಸ್ಕರಣೆ ಉದ್ಯಮ, ಆಹಾರ ಉತ್ಪನ್ನಗಳನ್ನು ಉತ್ಪಾದಿಸುವ ರೈತರನ್ನು ಲಕ್ಷಾಂತರ ಗ್ರಾಹಕರಿಗೆ ತಂತ್ರಜ್ಞಾನ ಆಧಾರಿತ ಮಾರ್ಕೆಟ್ ಪ್ಲೇಸ್ ಗೆ ಸಂಪರ್ಕ ಸಾಧಿಸಲು ಆದ್ಯತೆ ನೀಡುತ್ತವೆ ಮತ್ತು ನೆರವಾಗುತ್ತವೆ. ಫ್ಲಿಪ್ ಕಾರ್ಟ್ ಗ್ರಾಸರಿ ಕಳೆದ ಒಂದು ವರ್ಷದಲ್ಲಿ 3 ಪಟ್ಟು ಬೆಳವಣಿಗೆ ಕಂಡಿದೆ.ದೇಶದ ಅತ್ಯಂತ ವಿಸ್ತಾರವಾದ ಸಂಸ್ಥೆಗಳಲ್ಲಿ ಒಂದಾಗಿರುವ ಫ್ಲಿಪ್ ಕಾರ್ಟ್ ಗ್ರೂಪ್ ದೇಶಾದ್ಯಂತ ಸಂಘಟಿತವಾದ ಕೃಷಿಉತ್ಪನ್ನಗಳ ಪೂರೈಕೆ ಚೇನ್ ಮೂಲಕ ಅನೇಕ ರೈತರು/ಫಾರ್ಮರ್ ಪ್ರಡ್ಯೂಸರ್ ಆರ್ಗನೈಸೇಷನ್ ಗಳ ಜತೆಗೆ ಕಾರ್ಯ ನಿರ್ವಹಣೆ ಮಾಡುವುದರೊಂದಿಗೆ ಅವರ ಜೀವನ ಮಟ್ಟ ಸುಧಾರಣೆಗೆ ಕ್ರಮ ಕೈಗೊಂಡಿದೆ. ಸಾಂಕ್ರಾಮಿಕದ ಅವಧಿಯಲ್ಲಿ ಗ್ರಾಹಕರಿಗೆ ಉತ್ತಮವಾದ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಫ್ಲಿಪ್ ಕಾರ್ಟ್ ಗ್ರಾಸರಿ ಕೇವಲ ಪ್ರಮುಖ ರೀಟೇಲರ್ ಗಳ ಜತೆಯಲ್ಲಲ್ಲದೇ ಅನೇಕ ಎಫ್ ಪಿಒಗಳ ಜತೆಗೂ ಪಾಲುದಾರಿಕೆಯನ್ನು ಮಾಡಿಕೊಂಡಿದೆ. ಈ ಮೂಲಕ ದೇಶದ ರೈತ ಸಮುದಾಯವನ್ನೂ ಅಧಿಕೃತವಾಗಿ ಡಿಜಿಟಲ್ ವ್ಯಾಪ್ತಿಗೆ ತರುವ ಪ್ರಯತ್ನವನ್ನು ಮಾಡಿದೆ.

ಇತ್ತೀಚಿನ ರೆಡ್ ಸೀರ್ ಕನ್ಸಲ್ಟಿಂಗ್ ವರದಿಯ ಮುಖ್ಯಾಂಶಗಳ ಪ್ರಕಾರ ಶೇ.50 ಕ್ಕೂ ಹೆಚ್ಚು (ಸುಮಾರು 570 ಬಿಲಿಯನ್ ಡಾಲರ್) ಭಾರತದಲ್ಲಿ ಇ-ಗ್ರಾಸರಿ ವೇದಿಕೆಗಳ ಮೂಲಕ ರೀಟೇಲ್ ವಹಿವಾಟನ್ನು ನಡೆಸಲಾಗಿದೆ. ಇದರಲ್ಲಿ ಶೇ.61 ರಷ್ಟು ಭಾಗ ಗೃಹೋಪಯೋಗಿ ಉತ್ಪನ್ನಗಳ ಮಾರಾಟವಾಗಿದೆ. ಮೆಟ್ರೋ ಮತ್ತು 1 ನೇ ಶ್ರೇಣಿಯ ನಗರಗಳ ಮಾರುಕಟ್ಟೆಗಳಲ್ಲಿ ಈ ಇ-ಗ್ರಾಸರಿ ಶಾಪಿಂಗ್ ಅವಕಾಶವನ್ನು ಶೇ.40 ರಷ್ಟು ಮಂದಿ ಪಡೆದುಕೊಂಡಿದ್ದಾರೆ.

ಫ್ಲಿಪ್ ಕಾರ್ಟ್ ಗ್ರಾಸರಿ ತನ್ನ ಶಕ್ತಿಯುತವಾದ ಪೂರೈಕೆ ಜಾಲ, ವಿಸ್ತಾರವಾದ ಉತ್ಪನ್ನಗಳ ಲಭ್ಯತೆ ಮತ್ತು ಸ್ಥಳೀಯ ಮತ್ತು ತಡೆರಹಿತವಾದ ಶಾಪಿಂಗ್ ಅನುಭವದೊಂದಿಗೆ ನಿಯಮಿತ ಅವಧಿಯಲ್ಲಿ ವಿತರಣೆಯನ್ನು ಮಾಡುತ್ತಿದೆ. ಫ್ಲಿಪ್ ಕಾರ್ಟ್ ನ ಧ್ವನಿ ಆಧಾರಿತ ಶಾಪಿಂಗ್ ಅನ್ನು ಗ್ರಾಸರಿಯಲ್ಲಿ ಪರಿಚಯಿಸಲಾಗಿದೆ. ಕ್ರೆಡಿಟ್ ಆಫರಿಂಗ್ ಗಳು, ಓಪನ್ ಬಾಕ್ಸ್ ಡೆಲಿವರಿಗಳು ಲಕ್ಷಾಂತರ ಗ್ರಾಹಕರಿಗೆ ತಡೆರಹಿತ ಗ್ರಾಸರಿ ಶಾಪಿಂಗ್ ಅನುಭವವನ್ನು ನೀಡುತ್ತಿವೆ. ಇದಲ್ಲದೇ, ಫ್ಲಿಪ್ ಕಾರ್ಟ್ `ಫ್ಲಿಪ್ ಕಾರ್ಟ್ ಕ್ವಿಕ್' ಎಂಬ ಹೈಪರ್ ಲೋಕಲ್ ಡೆಲಿವರಿ ಮಾಡೆಲ್ ಅನ್ನು ಬೆಂಗಳೂರಿನಲ್ಲಿ ಪರಿಚಯಿಸಿದ್ದು, ಆರ್ಡರ್ ಮಾಡಿದ ಕೇವಲ 90 ನಿಮಿಷಗಳಲ್ಲಿ ಉತ್ಪನ್ನಗಳ ಡೆಲಿವರಿಯಾಗಲಿದೆ.

ಫ್ಲಿಪ್ ಕಾರ್ಟ್ ತನ್ನ ಗ್ರಾಸರಿ ವ್ಯವಹಾರಕ್ಕಾಗಿ ಇತ್ತೀಚೆಗೆ ದೇಶವ್ಯಾಪಿ ಅಭಿಯಾನವನ್ನು ಆರಂಭಿಸಿದೆ. ಗ್ರಾಹಕರ ಅಭಿರುಚಿಗಳು ಮತ್ತು ಬೇಡಿಕೆಗಳ ಬಗ್ಗೆ ಆಮೂಲಾಗ್ರವಾಗಿ ಸಂಶೋಧನೆ ನಡೆಸಿ ಈ ಅಭಿಯಾನವನ್ನು ಆರಂಭಿಸಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric

innovations that have made online shopping more accessible and affordable for millions of Indians. Together with Myntra, which holds a prominent position in the online fashion market and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**